ಫೋನ್ ಮಾಡ್ಬಹುದು ಅಂತ ಎಣಿಸ್ತಾ ಇದ್ದೇನೆ. ಒಮ್ಮೆ ಅವ ಫೋನ್ ಮಾಡಿದ್ರೆ ಹೋಗುವಾ ಅಂತ ಮನಸ್ಸು ಹೇಳ್ತದೆ.'

'ಹ ಹ್ಹಾ... ತಮ್ಮಾ ನಿಂಗೆಲ್ಲೋ ಹುಚ್ಚು' ಅಂತ ಹೇಳಿದ ಸಾಧು ಗಹಗಹಿಸಿ ನಕ್ಕ.

'ನೋಡು ತಮ್ಮಾ, ಹೆಚ್ಚೂ ಕಡಿಮೆ ನಮ್ಮದೂ ಇದೇ ಕತೆ. ನಿಂಗೆ ಈಗ ಆದ ಅನುಭವ ನಮಗೆ ಯಾವತ್ತೋ ಆಗಿದೆ. ನಾವು ಹೀಗೆಯೆ ಅಲೆದಾಡ್ತಾ ಆಡ್ತಾ ಊರೂರಲ್ಲಿ ಸೇರಿಕೊಂಡವರು. ನಮ್ಮ ಹಿನ್ನೆಲೆ ಎಲ್ಲ ಕೇಳಬಾರದು. ನಾವು ಹೇಳೋದೂ ಇಲ್ಲ. ನಾವು ಈ ಕೊರೊನಾ ಗಿರೋನಾಕ್ಕೆಲ್ಲ ಹೆದರುವವರೂ ಅಲ್ಲ. ಊರೂರು ಅಲೀತೇವೆ. ಯಾರೋ ಪುಣ್ಯಾತ್ಮರು ಭಿಕ್ಷೆ ಹಾಕ್ತಾರೆ. ಸಿಕ್ಕಿದ್ದು ತಿಂತೇವೆ. ತೀರ್ಥಕ್ಷೇತ್ರ ಸುತ್ತುತ್ತೇವೆ. ನೀನೂ ನಮ್ಮ ಜೊತೆ ಸೇರಿಕೊಳ್ತೀಯಾ?'

ದಯಾನಂದನಿಗೆ ಗೊಂದಲ ಆಯ್ತು. ಒಂದಿಷ್ಟು ಹೊತ್ತು ಯೋಚನೆ ಮಾಡಿ ಕಡೆಗೆ, 'ಸಾಧೂ ಮಹಾರಾಜ್, ಈಗ ಹೇಗೂ ಕತ್ತಲೆ ಆಯ್ತು. ನಾನು ಈ ರಾತ್ರಿ ನಿಮ್ಮ ಒಟ್ಟಿಗೆ ಇರ್ತೇನೆ. ನಾಳೆ ಬೆಳಗ್ಗೆಯವರೆಗೆ ಯೋಚನೆ ಮಾಡ್ತೇನೆ. ಆಮೇಲೆ ಹೇಳ್ತೇನೆ' ಅಂದ.

ಆವತ್ತು ರಾತ್ರಿ ಅಲ್ಲಿಯೇ ಇದ್ದ ಹೊಳೆಯಲ್ಲಿ ಮಿಂದು ಸಾಧುಗಳು ಬೇಡಿ ತಂದಿದ್ದ ಆಹಾರವನ್ನೇ

